

YENEPOYA
[DEEMED TO BE UNIVERSITY]
Recognized under Sec 3(A) of the UGC Act 1956
Accredited by NAAC with 'A' Grade

# ಯೇನೇಪೋಯ ವೈದ್ಯಕೀಯ ಕಾಲೇಜು ಆಸ್ಪತ್ರೆ



## ಯೇನೇಪೋಯ ಆಸ್ಪತ್ರೆಯ ರೋಗಿಯಾಗಿ ನಿಮ್ಮ ಹಕ್ಕುಗಳು

1. ಜಾತಿ ಜನಾಂಗ, ಲಿಂಗ ಭೇದ, ಬಣ್ಣ, ಮೂಲ, ಮತ, ವಯಸ್ಸು, ಪ್ರಾದೇಶಿಕತೆ, ಭಾಷೆ ಇಂತಹ ಯಾವುದೇ ತಾರತಮ್ಯವಿಲ್ಲದೆ ಆರೋಗ್ಯ ಸೇವೆಯನ್ನು ಪಡೆಯುವುದು.
2. ಸುರಕ್ಷಿತ ವಾತವರಣದಲ್ಲಿ ಆರೋಗ್ಯ ಸೇವೆಯನ್ನು ಪಡೆಯುವುದು.
3. ನಿಮ್ಮ ವೈಯಕ್ತಿಕ, ಸಂಸ್ಕೃತಿ, ಆಧ್ಯಾತ್ಮ ಮತ್ತು ಸಾಮಾಜಿಕ ಮೌಲ್ಯಗಳ ಬಗ್ಗೆ ಗೌರವವನ್ನು ಪಡೆಯುವುದು.
4. ಮಾತು, ದೈಹಿಕ ಮತ್ತು ಮಾನಸಿಕವಾದ ನಿಂದನೆಗಳಿಂದ ಮುಕ್ತವಾದ ಆರೋಗ್ಯ ಸೇವೆಯನ್ನು ಪಡೆಯುವುದು.
5. ಪರೀಕ್ಷೆ ಮಾಡುವ ಸಮಯದಲ್ಲಿ ಮತ್ತು ಚಿಕಿತ್ಸೆ ನಡೆಯುವಾಗ ನಿಮ್ಮ ಘನತೆ, ಏಕಾಂತತೆ, ಸುರಕ್ಷತೆ, ಹಿತವನ್ನು ಬಯಸುವ ಆರೋಗ್ಯ ಸೇವೆಯನ್ನು ಪಡೆಯುವುದು.
6. ನಿಮಗೆ ಅರ್ಥವಾಗುವಂತೆ ನಾವು ನಿಮ್ಮಲ್ಲಿ ಸಂವಹನ ಮಾಡುವುದನ್ನು ನಿರೀಕ್ಷಿಸುವುದು.
7. ಚಿಕಿತ್ಸೆ ನೀಡುವ ವೈದ್ಯರ ಹೆಸರು, ಆರೋಗ್ಯ ಸೇವೆಯ ಯೋಜನೆ, ಸುಧಾರಣೆ ಮತ್ತು ಅವರ ಆರೋಗ್ಯ ಸೇವೆಯ ಯೋಜನೆ, ಸುಧಾರಣೆ ಮತ್ತು ಅವರ ಆರೋಗ್ಯ ಸೇವೆ ಅಗತ್ಯತೆಗಳ ಬಗ್ಗೆ ತಿಳಿದುಕೊಳ್ಳುವುದು.
8. ನಿಮಗೆ ಅವಶ್ಯಕವಾದ ಆರೋಗ್ಯ ಸೇವೆ ಮತ್ತು ಚಿಕಿತ್ಸಾ ವಿಧಾನದ ಬಗ್ಗೆ ತಿಳಿದು ಕೊಂಡು ನಿಮ್ಮ ನಿರ್ಧಾರಗಳನ್ನು ತೆಗೆದು ಕೊಳ್ಳುವುದು. ನಿಮಗಾಗಿ ಆಯ್ಕೆ ಮಾಡಿದ ಪರೀಕ್ಷೆ ಮತ್ತು ಚಿಕಿತ್ಸಾ ವಿಧಾನವನ್ನು ಒಪ್ಪುವ ಅಥವಾ ನಿರಾಕರಿಸುವ ಅಥವಾ ಇತರ ಪರೀಕ್ಷಾ ವಿಧಾನಗಳು /ಹೆಚ್ಚಿನ ಅಭಿಪ್ರಾಯವನ್ನು ಪಡೆಯುವುದೂ ಇದರಲ್ಲಿ ಸೇರಿವೆ.
9. ರೋಗಿಯ ಆರೋಗ್ಯ ಸ್ಥಿತಿಯ ಬದಲಾವಣೆಗಳ ಮಾಹಿತಿಯನ್ನು ಸಮಯಕ್ಕೆ ಸರಿಯಾಗಿ ಪಡೆಯುವುದು.
10. ನಿಮ್ಮ ಆರೋಗ್ಯದ ಬಗ್ಗೆ ಸಂಪೂರ್ಣ ಮಾಹಿತಿ ಪಡೆಯುವುದು, ರೋಗದ ಬಗ್ಗೆ ಮಾಹಿತಿ ಪಡೆಯುವುದು, ಬಯಸಿದ ಚಿಕಿತ್ಸಾ ವಿಧಾನಗಳು, ಎದುರಾಗುವ ಅಪಾಯಗಳು, ಲಾಭಗಳು, ಬದಲಿ ವ್ಯವಸ್ಥೆಗಳು, ನಿರೀಕ್ಷಿತ ಪಲಿತಾಂಶಗಳು, ಎದುರಾಗುವ ಸಮಸ್ಯೆಗಳು, ತಡೆಗಟ್ಟುವ ವಿಧಾನಗಳು ಹಾಗೂ ನಿಮ್ಮ ಆರೋಗ್ಯ ಸೇವೆಯ ನಿರ್ಧಾರದ ಬಗ್ಗೆ ಪೂರ್ತಿಯಾಗಿ ಭಾಗವಹಿಸುವುದು ಇತ್ಯಾದಿ.
11. ಯಾವುದೇ ವಿಧವಾದ ಹತೋಟಿ ಅಥವಾ ಏಕಾಂತತೆ /ವಿವಿಕ್ತತೆಯಿಂದ ಮುಕ್ತರಾಗುವುದು, ಸಿಬ್ಬಂದಿಗಳಿಂದ ವೈದ್ಯಕೀಯವಾಗಿ ಅವಶ್ಯಕತೆಯಿಲ್ಲದ ಅಥವಾ ಬಲವಂತ ಪಡಿಸುವಿಕೆ, ಅನುಕೂಲತೆ ಅಥವಾ ಪ್ರತೀಕಾರ, ನಿರ್ಬಂಧ ಮತ್ತು ಏಕಾಂತತೆ ಕೇವಲ ನಿಮ್ಮ ಆರೋಗ್ಯ ವೃದ್ಧಿಗೆ ಮತ್ತು ನಿಮ್ಮನ್ನು ಯಾವುದೇ ಅಪಾಯದಿಂದ ರಕ್ಷಿಸಲು ಮತ್ತು ನಿಮಗೆ ಹಾಗೂ ನಿಮ್ಮ ಮನೆಯವರಿಗೆ ತಿಳಿಸಲ್ಪಡುವುದು.
12. ವೈವಿಧ್ಯಮಯವಾದ ಶಿಸ್ತಿನ ಸೂಕ್ತ ಆಪ್ತಸಲಹೆಯನ್ನು ಪಡೆಯುವುದು.
13. ನಿರ್ಧಾರ ಮಾಡಿಕೊಳ್ಳುವ ಸಾಮರ್ಥ್ಯವಿಲ್ಲದಿದ್ದರೆ ಅಥವಾ ಯಾವುದೇ ಪೂರ್ವ ನಿರ್ಧರಿತ ಸೂಚನೆಗಳು ಇಲ್ಲದಿದ್ದಾಗ ಸೂಕ್ತವಾದ ಪರ್ಯಾಯ ವ್ಯವಸ್ಥೆಯನ್ನು ನಿರೀಕ್ಷಿಸುವುದು.
14. ನಿಮಗೆ ಶುಶ್ರೂಷೆ ನೀಡುವ ಸಿಬ್ಬಂದಿಗಳೊಡನೆ ನಿಮ್ಮ ಶುಶ್ರೂಷೆಯ ಬಗ್ಗೆ ಸಮಸ್ಯೆ ಕಂಡು ಬಂದಾಗ ಪ್ರಶ್ನಿಸುವುದು.
15. ಆಸ್ಪತ್ರೆಯ ನೀತಿ ನಿಯಮಗಳಿಗೆ ಅನುಸಾರವಾಗಿ ನಿಮ್ಮನ್ನು ಇತರರು ಭೇಟಿಯಾಗುವುದು, ನಿಮ್ಮನು ಭೇಟಿಯಾಗುವವರನ್ನು ತಡೆಯಲು ಬಲವಾದ ವೈದ್ಯಕೀಯ ಮತ್ತು ಸಾಂಸ್ಥಿಕ ಕಾರಣಗಳಿರುವುದನ್ನು ತಿಳಿಯುವುದು.
16. ಯಾವುದೇ ರೀತಿಯ ಸಂಶೋಧನಾ ಚಿಕಿತ್ಸಾವಿಧಾನವನ್ನು ಪ್ರಯೋಗಿಸುವ ಮೊದಲು ನಿಮಗೆ ತಿಳಿಸುವುದು ಹಾಗೂ ಇದರಲ್ಲಿ ಭಾಗವಹಿಸುವ ಬಗ್ಗೆ ನಿಮ್ಮ ಒಪ್ಪಿಗೆ ಅಥವಾ ನಿರಾಕರಣೆಯ ಬಗ್ಗೆ ತಿಳಿಯುವುದು.
17. ಆಸ್ಪತ್ರೆಯಲ್ಲಿ ಸಿಗುವ ಶುಶ್ರೂಷೆ ಮತ್ತು ಸೇವೆಯ ಬಗ್ಗೆ ಲೋಪವಿದ್ದಲ್ಲಿ ಯಾವುದೇ ಭಯ ಭೇದವಿಲ್ಲದೆ ದೂರು ಅಥವಾ ಅರ್ಜಿ ನೀಡುವುದು ಅಥವಾ ಈ ಬಗ್ಗೆ ಪ್ರಶ್ನಿಸುವುದು ಮತ್ತು ನಿಮ್ಮ ಪ್ರಶ್ನೆಗಳಿಗೆ ಸೂಕ್ತ ಪ್ರತಿಕ್ರಿಯೆ ಪಡೆಯುವುದು. ದೂರು ಅರ್ಜಿಯನ್ನು ನೀಡುವ ಬಗ್ಗೆ ಮಾಹಿತಿಯನ್ನು ಪಡೆಯುವುದು.
18. ನಿಮ್ಮ ಆರೋಗ್ಯ ವರದಿಯನ್ನು ರಹಸ್ಯವಾಗಿಡುವುದು, ವೈದ್ಯಕೀಯ ಮತ್ತು ವೈಯಕ್ತಿಕ ಮಾಹಿತಿಗಳನ್ನು ರಹಸ್ಯವಾಗಿಟ್ಟಿರುವ ಬಗ್ಗೆ ಭರವಸೆ ಪಡೆಯುವುದು.
19. ನಿಮಗೆ ಚಿಕಿತ್ಸೆ ನೀಡುವ ವೈದ್ಯರಿಂದ /ವೈದ್ಯಕೀಯ ದಾಖಲಾತಿ ವಿಭಾಗದಿಂದ ನಿಮ್ಮ ಆರೋಗ್ಯ ವರದಿಯ ಮಾಹಿತಿಯನ್ನು ಸೂಕ್ತ ಸಮಯದಲ್ಲಿ ಪಡೆಯುವುದು.
20. ಯಾವುದಾದರೂ ಚಿಕಿತ್ಸೆಯ ದರದ ಬಗ್ಗೆ ಮಾಹಿತಿ ಪಡೆಯುವುದು ಮತ್ತು ನಿಮ್ಮ ಕೋರಿಕೆ ಮೇರೆಗೆ ನಿಮ್ಮ ಬಿಲ್‌ನಲ್ಲಿ ಈ ಬಗ್ಗೆ ವಿವರಣೆ ಪಡೆಯುವುದು.
21. ಆಸ್ಪತ್ರೆಯಿಂದ ರೋಗಿಯ ಡಿಸ್ಚಾರ್ಜ್ ಮಾಡಿಸುವ ಅಥವಾ ನಿಧನರಾದ ವ್ಯಕ್ತಿಯ ದೇಹವನ್ನು ಪಡೆಯುವುದು.



## ಯೇನೇಪೋಯ ಆಸ್ಪತ್ರೆಯ ರೋಗಿಯಾಗಿ ನಿಮ್ಮ ಜವಾಬ್ದಾರಿಗಳು



1. ಸೌಲಭ್ಯ, ಕಾರ್ಯನೀತಿ ಮತ್ತು ಕ್ರಮಗಳು – ಧೂಮಪಾನ ಮಾಡುವುದು, ಶಬ್ದ (ಗಲಾಟೆ) ಮತ್ತು ಭೇಟಿಯಾಗುವವರ ಸಂಖ್ಯೆ ಇವುಗಳನ್ನೆಲ್ಲಾ ಗಮನಿಸಿ.
2. ಎಲ್ಲಾ ರೀತಿಯ ವೈಯಕ್ತಿಕ ಮತ್ತು ಕುಟುಂಬದ ಆರೋಗ್ಯ ಮಾಹಿತಿಯನ್ನು ನೀಡುವುದು. ನಿಮ್ಮ ವರದಿಯಲ್ಲಿ ನೀವು ನೋವಲ್ಲಿದ್ದರೆ ಅಥವಾ ನೋವು ನಿವಾರಣೆ ಆಗಬೇಕಾಗಿದೆ ಎಂಬ ಅಂಶವು ಇದರಲ್ಲಿ ಸೇರಿದೆ.
3. ನಿಮ್ಮ ವೈದ್ಯಕೀಯ ಚಿಕಿತ್ಸಾ ಕ್ರಮದ ನಿರ್ಧಾರಗಳನ್ನು ಮಾಡುವಲ್ಲಿ ನಿಮ್ಮ ಭಾಗವಹಿಸುವಿಕೆ ಮತ್ತು ಒಪ್ಪಿಕೊಂಡ ಚಿಕಿತ್ಸಾ ಕ್ರಮಕ್ಕೆ ಸಮ್ಮತಿಸುವುದು.
4. ಯಾವುದಾದರೂ ವಿಷಯಗಳು ಅಥವಾ ಸಲಹೆಗಳ ಬಗ್ಗೆ ತಿಳಿಯದೇ ಇದ್ದಾಗ ನಿಮಗೆ ಚಿಕಿತ್ಸೆ ನೀಡುವ ವೈದ್ಯರಿಂದ ಅಥವಾ ಇತರ ಆರೋಗ್ಯ ಕಾರ್ಯಕರ್ತರ ಮೂಲಕ ನಿಮ್ಮ ಸಂದೇಹವನ್ನು ಪರಿಹರಿಸುವುದು.
5. ರೋಗಿಗಳ ಅಪಾಯಿಂಟ್ಮೆಂಟ್ ಬಗ್ಗೆ ಇರುವ ಎಲ್ಲಾ ಸೂಚನೆಗಳನ್ನು ಪಾಲಿಸತಕ್ಕದು ಮತ್ತು ಆಸ್ಪತ್ರೆಯ ಎಲ್ಲಾ ಸಿಬ್ಬಂದಿ ಹಾಗೂ ಇತರ ರೋಗಿಗಳಿಗೆ ಸಹಕಾರಿಯಾಗಿ ನಡೆದುಕೊಳ್ಳ ತಕ್ಕದು, ಉಳಿದ ರೋಗಿಗಳಿಗೆ ತೊಂದರೆ ಉಂಟು ಮಾಡಬಾರದು, ಆಸ್ಪತ್ರೆಯಲ್ಲಿ ಸ್ವಚ್ಚತೆಯನ್ನು ಪಾಲಿಸತಕ್ಕದು.
6. ರೋಗಿಗಳು ವೈದ್ಯರನ್ನು ಮತ್ತು ಆಸ್ಪತ್ರೆಯ ಇತರ ಸಿಬ್ಬಂದಿಗಳನ್ನು ಮನುಷ್ಯರಂತೆ ಮತ್ತು ವೃತ್ತಿಪರರಂತೆ ಗೌರವಿಸಬೇಕು. ಯಾವುದೇ ರೀತಿಯ ನೋವಿರಲಿ ರೋಗಿ/ರೋಗಿಯನ್ನು ನೋಡಿ ಕೊಳ್ಳುವವರು ಗಲಾಟೆ ಮಾಡತಕ್ಕದ್ದಲ್ಲ. ಅಲ್ಲದೆ ಆಸ್ಪತ್ರೆ ಮತ್ತು ಸೇವೆ ನೀಡುವವರ ವಸ್ತುಗಳಿಗೆ/ ಆಸ್ತಿಗಳಿಗೆ ಯಾವುದೇ ರೀತಿಯಲ್ಲಿ ಹಾನಿಯೆಸಗ ಬಾರದು.
7. ಚಿಕಿತ್ಸಾ ವಿಧಾನ ಆಯ್ಕೆ ಮಾಡಿದವರು ತಾವು ಆಯ್ಕೆ ಮಾಡಿದ ಚಿಕಿತ್ಸಾ ವಿಧಾನವನ್ನು ಒಪ್ಪಿಕೊಳ್ಳದಿದ್ದರೆ ರೋಗಿಗಳೇ ಜವಾಬ್ದಾರರು.
8. ಆರೋಗ್ಯ ಸೇವೆಗಾಗಿ ಹಣಕಾಸಿನ ಜವಾಬ್ದಾರಿ ರೋಗಿಗಳದ್ದು ಮತ್ತು ಬಿಲ್ ಅನ್ನು ತಪ್ಪದೇ ಪಾವತಿಸ ತಕ್ಕದ್ದು.

**ಯಾವುದೇ ತುರ್ತು ಸೇವೆಗಳು /ವಿಚಾರಣೆಗಳು /ಸಲಹೆಗಳಿಗಾಗಿ ದಯವಿಟ್ಟು ಸಂಪರ್ಕಿಸಿ : 9686985055**